Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 12/2025

ಪ್ರಾ.ಸಾ. 5 ಚಾ.ಸಾ 11

| | | |
|---|---|---|
| ಹೆಸರು | : | ರಾಜು |
| ತಂದೆಯ ಹೆಸರು | : | ಹಣಮಂತ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಫೋಟೊಗ್ರಾಫರ |
| ವಾಸ | : | ಕಾಕಲವಾರ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 09-01-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-10 ರವರ ಪರಿಚಯ ಇರುತ್ತದೆ. ದಿಃ 06.10.2024 ರಂದು ಗುರುಮಠಕಲ್ ಪೊಲೀಸರ ಠಾಣಗೆ ಕರೆಯಿಸಿದಾಗ ಸಾಯಂಕಾಲ 6.30 ಗಂಟೆ ಆಗಿತ್ತು. ಮೃತನ ಅಂಗಾಂಗಗಳು (ವಿಶ್ರು) ತೆಗೆದುಕೊಂಡು ಬಂದಿದ್ದು ಅದನ್ನು ನಮ್ಮ ಮುಂದೆ ಜಪ್ತಿ ಪಡಿಸಿಕೊಂಡು ಪಂಚನಾಮೆ ಮಾಡಿ ಭಾವಚಿತ್ರಗಳನ್ನು ಪಡೆದುಕೊಂಡಿರುತ್ತಾರೆ. ಸದರಿ ಜಪ್ತಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು **ನಿ.ಪಿ.35** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.35(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಒಟ್ಟು ಎರಡು ಭಾವಚಿತ್ರಗಳನ್ನು ತಗೆದಿದ್ದು ಅವುಗಳನ್ನು **ನಿ.ಪಿ.36 ಮತ್ತು 37** ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ

2. ದಿಃ 06.10.2024 ರಂದು ಸಾಯಂಕಾಲ 6.30 ಗಂಟೆಗೆ ಚಾಸಾ-32 ಇವರು ಹಾಜರುಪಡಿಸಿದ ಮೃತನ ಅಂಗಾಂಗಗಳು (ವಿಶ್ರು) ಅದನ್ನು ನಮ್ಮ ಹಾಜರುಪಡಿಸಿ ಜಪ್ತಿ ಪಂಚನಾಮೆ ಮಾಡಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.35 ರಲ್ಲಿ ಅವುಗಳನ್ನು ಸೀಲ ಮಾಡಿದ ಬಗ್ಗೆ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಆ ಭಾವಚಿತ್ರಗಳನ್ನು ತೆಗೆದ ಬಗ್ಗೆ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ.